## 2015 ಕ.ತೀ.ವ 163

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇಗೌಡ

### ಶಿವಪುತ್ರಪ್ಪ ಮತ್ತು ಮತ್ತೊಬ್ಬರು –ವಿರುದ್ಧ– ಶ್ರೀಮತಿ ನಿಂಗಮ್ಮ ಮತ್ತು ಇತರರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಕರ್ನಾಟಕ ಮುದ್ರಾಂಕ ಕಾಯಿದೆ ಕಲಂ 34.

ಅಧಿವಿಚಾರಣಾ ನ್ಯಾಯಾಲಯವು ಪ್ರತಿವಾದಿಗಳು 2 ಮತ್ತು 4 ರವರು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ಕರ್ನಾಟಕ ಮುದ್ರಾಂಕ ಕಾಯಿದೆ ಕಲಂ 34ರನ್ವಯ ಹತ್ತುಪಟ್ಟು ಮುದ್ರಾಂಕ ಶುಲ್ಕದ ಮೊತ್ತವಾಗಿ 1,91,400/– ರೂ.ಗಳ ಶುಲ್ಕವನ್ನು ಠೇವಣಿ ಮಾಡುವಂತೆ ನೀಡಿದ ಆದೇಶ ಕ್ರಮವನ್ನು ಪ್ರಶ್ನಿಸಿ ರಿಟ್ ಅರ್ಜಿ. ಪ್ರತಿವಾದಿಗಳು ಸಲ್ಲಿಸಿದ ರಿಟ್ ಅರ್ಜಿಯ ಅಂತಿಮ ಆದೇಶಕ್ಕಾಗಿ ಕಾಯದೆ ದಾವೆಯ ನಡವಳಿಗಳನ್ನು ಮುಂದುವರಿಸುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ಕೋರಿ ವಾದಿಯವರಿಂದ ಪ್ರತ್ಯೇಕ ರಿಟ್ ಅರ್ಜಿ ಸಲ್ಲಿಕೆ.

2 ಮತ್ತು 4ನೇ ಪ್ರತಿವಾದಿಗಳು ನೋಂದಣಿಯಾಗದ ವಿಭಾಗ ಪತ್ರವನ್ನು ಸಾಕ್ಷೀಕರಿಸಬೇಕಾದಲ್ಲಿ ಮುದ್ರಾಂಕ ಶುಲ್ಕವನ್ನು ನೀಡಲೇಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಪ್ರತಿವಾದಿಗಳ ರಿಟ್ ಅರ್ಜಿಯನ್ನು ವಜಾಗೊಳಿಸಿ, ದಾವೆಯನ್ನು ಆದಷ್ಟು ಶೀಘ್ರವಾಗಿ ಬಗೆಹರಿಸುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ಆದೇಶಿಸುತ್ತಾ, ವಾದಿಗಳ ರಿಟ್ ಅರ್ಜಿಯನ್ನು ವಿಲೇಖಿಸಲಾಗಿದೆ.

*ರಿಟ್ ಅರ್ಜಿ ಸಂ. 70162/2012 (ಜಿಎಂ–ಸಿಪಿಸಿ) ಇದರೊಂದಿಗೆ ಇತರೆ, ದಿನಾಂಕ: 18ನೇ ಫೆಬ್ರವರಿ, 2014.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 2011 (4) ಕೆಸಿಸಿಆರ್ 2799*
*ಕೆ. ಗೋವಿಂದೇಗೌಡ -ವಿರುದ್ಧ-*
*ಅಕ್ಕಯ್ಯಮ್ಮ ಮತ್ತು ಇತರರು (ಉಲ್ಲೇ) 10*
*2. ಎಐಆರ್ 2013 ಕೆಎಆರ್ಎನ್ 52*
*ಮಿಸ್. ಸಾಂಡ್ರಾ ಲೆಸ್ಲಿ ಅನ್ನಾ ಬಾರ್ಟೆಲ್ಸ್*
*-ವಿರುದ್ಧ- ಮಿಸ್.ಪಿ. ಗುಣವತಿ (ಉಲ್ಲೇ) 11*
*3. 2013(4) ಕೆಎಆರ್.ಎಲ್.ಎಲ್.ಜೆ. 247 (ಡಿಬಿ)*
*ದಿಗಂಬರ್ ವರ್ತಿ ಮತ್ತು ಇತರರು -ವಿರುದ್ಧ-*
*ಜಿಲ್ಲಾ ರಿಜಿಸ್ಟ್ರಾರ್, ಬೆಂಗಳೂರು ನಗರ ಜಿಲ್ಲೆ,*
*ಬೆಂಗಳೂರು ಮತ್ತು ಮತ್ತೊಬ್ಬರು (ಉಲ್ಲೇ) 11*

ಅರ್ಜಿದಾರರ ಪರ : ಶ್ರೀ ವಿ.ಎಂ.ಶೀಲವಂತ್ ಮತ್ತು ಶ್ರೀ ವಿನಯ್ ಎಸ್.ಕೌಜಲಗಿ- ವಕೀಲರು ರಿ.ಅ. ಸಂಖ್ಯೆ: 70162/2012ರಲ್ಲಿ
ಶ್ರೀ ಬಿ. ಶರಣಬಸವ, ವಕೀಲರ ಪರವಾಗಿ ಶ್ರೀ ಎ.ಬಿ. ಪಾಟೀಲ್, ವಕೀಲರು ರಿ.ಅ.ಸಂಖ್ಯೆ:85787/2013ರಲ್ಲಿ

1ರಿಂದ 4ನೇ ಪ್ರತ್ಯರ್ಜಿದಾರರ ಪರ : ಮೆ: ಎಂ.ಸಿ. ಬಂಡಿ ಅಸೋಸಿಯೇಟ್ಸ್ - ವಕೀಲರು ರಿ.ಅ. ಸಂಖ್ಯೆ: 70162/2012ರಲ್ಲಿ

1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ವಿ.ಎಂ. ಶೀಲವಂತ್, ವಕೀಲರು, ರಿ.ಅ. ಸಂಖ್ಯೆ: 85787/2013ರಲ್ಲಿ

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇಗೌಡ:**

ಅಧಿವಿಚಾರಣಾ ನ್ಯಾಯಾಲಯವು, 2 ಮತ್ತು 4ನೇ ಪ್ರತಿವಾದಿಗಳು 151ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಐ.ಎ.ಸಂ. 16, ಅರ್ಜಿಯನ್ನು ಅಂಗೀಕರಿಸಿ, ಕರ್ನಾಟಕ ಸ್ಟ್ಯಾಂಪು ಅಧಿನಿಯಮ (ಇನ್ನು ಮುಂದೆ ಸಂಕ್ಷಿಪ್ತವಾಗಿ ಅಧಿನಿಯಮ ಎಂದು

ಕರೆಯಲಾಗಿದೆ)ದ 34ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ, ಸಂದಾಯ ಮಾಡಬೇಕಾದ ಸ್ಟಾಂಪು ಶುಲ್ಕದ ಮೇಲೆ ದಂಡದ ಹತ್ತುಪಟ್ಟನ್ನು ಸಂದಾಯ ಮಾಡಲು ಅವರಿಗೆ ನಿರ್ದೇಶಿಸಿ ಮತ್ತು 1,91,400/– ರೂ.ಗಳ ಕೊರತೆಯಾದ ಸ್ಟಾಂಪು ಶುಲ್ಕವನ್ನು ಠೇವಣಿ ಮಾಡಲು ನಿರ್ದೇಶಿಸಿರುವ, 28.08.12ನೇ ದಿನಾಂಕದ ಆದೇಶ ಅನುಬಂಧ–ಹೆಚ್ ಅನ್ನು ರದ್ದುಪಡಿಸಿ ಸರ್ಷಿಯೋರರಿ ರಿಟ್ ಅನ್ನು ಕೋರಿ, ಹುನಗುಂದದ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರ ಕಡತದ ಮೇಲೆ, ಓ.ಎಸ್. 18/2009ರಲ್ಲಿ 2 ಮತ್ತು 4ನೇ ಪ್ರತಿವಾದಿಗಳು, ರಿಟ್ ಅರ್ಜಿ ಸಂಖ್ಯೆ: 70162/12ನ್ನು ಸಲ್ಲಿಸಿರುತ್ತಾರೆ.

2. ವಾದಿಗಳು ಸಲ್ಲಿಸಿದ ಐ.ಎ. 26ನ್ನು ತಿರಸ್ಕರಿಸಿ, 2 ಮತ್ತು 4ನೇ ಪ್ರತಿವಾದಿಗಳು ಸಲ್ಲಿಸಿರುವ ರಿಟ್ ಅರ್ಜಿ ಸಂ. 70162/12ರ ತೀರ್ಪಿಗೆ ಕಾಯಿದೆ ದಾವೆಯೊಂದಿಗೆ ಮುಂದುವರೆಯಲು ಅಧಿವಿಚಾರಣಾ ನ್ಯಾಯಾಲಯಕ್ಕೆ, ಮ್ಯಾಂಡಮಸ್ ರಿಟ್ ಅರ್ಜಿಗೆ ಸಂಬಂಧಿಸಿದಂತೆ ನಿರ್ದೇಶಿಸಿ, 23.09.2003ನೇ ದಿನಾಂಕದ ಅನುಬಂಧ–ಹೆಚ್ ಆಗಿರುವ ಆದೇಶವನ್ನು ರದ್ದುಪಡಿಸಿ ಸರ್ಷಿಯೋರರಿ ರಿಟ್ ಅನ್ನು, ಸದರಿ ದಾವೆಯಲ್ಲಿ ಕೋರಿ ವಾದಿಗಳು ರಿಟ್ ಅರ್ಜಿ ಸಂ. 85787/13ನ್ನು ಸಲ್ಲಿಸಿರುತ್ತಾರೆ.

3. ಒಂದೇ ಪಕ್ಷಕಾರರ ನಡುವೆ, ಎರಡು ರಿಟ್ ಅರ್ಜಿಗಳಿದ್ದು, ಓ.ಎಸ್. 18/2009 ಎಂಬ ಒಂದೇ ದಾವೆಯಲ್ಲಿ ಹೊರಡಿಸಿದ ಬೇರೆಬೇರೆ ಆದೇಶಗಳನ್ನು ಅವರು ಪ್ರಶ್ನಿಸಿರುವುದರಿಂದ, ಅವರನ್ನು ಒಟ್ಟಿಗೆ ಸುನಾವಣೆ ಮಾಡಿ, ಒಂದೇ ತೀರ್ಪನ್ನು ನೀಡಲಾಗಿರುತ್ತದೆ.

4. ಅನುಕೂಲದ ದೃಷ್ಟಿಯಿಂದ, ಪಕ್ಷಕಾರರನ್ನು, ಅಧಿವಿಚಾರಣಾ ನ್ಯಾಯಾಲಯದ ಮುಂದೆ ದಾವೆಯಲ್ಲಿ ಅವರನ್ನು ಉಲ್ಲೇಖಿಸಿರುವಂತೆಯೇ ಉಲ್ಲೇಖಿಸಲಾಗಿರುತ್ತದೆ.

5. ಈ ರಿಟ್ ಅರ್ಜಿಗಳನ್ನು ಮುನ್ನಡೆಸುವಂಥ ವಾಸ್ತವಾಂಶಗಳು ಈ ಮುಂದಿನಂತಿವೆ :

ವಾದಿಗಳು, ದಾವಾ ಸ್ವತ್ತುಗಳಲ್ಲಿ ತಮ್ಮ ಪಾಲನ್ನು ಮತ್ತು ತಮ್ಮ ಪಾಲಿನ ಪ್ರತ್ಯೇಕ ಅಧಿಭೋಗವನ್ನು ಕೋರಿ ದಾವೆ ಓ.ಎಸ್. 18/2009ನ್ನು ಹೂಡಿರುತ್ತಾರೆ. ಪ್ರತಿವಾದಿ ಸಂ. 2 ಅಂದರೆ ರಿಟ್ ಅರ್ಜಿ ಸಂ. 70162/12ರಲ್ಲಿ 1ನೇ ಪ್ರತ್ಯರ್ಜಿದಾರನು ವಾದಿಗಳ ವಾದವನ್ನು ನಿರಾಕರಿಸಿ ಲಿಖಿತ ಹೇಳಿಕೆಯನ್ನು ದಾಖಲಿಸಿರುತ್ತಾನೆ ಮತ್ತು 22.9.1993ನೇ ದಿನಾಂಕದ ಪಾಲು ಕ್ರಯಪತ್ರದ ಪ್ರಕಾರ ಅವರ ಕುಟುಂಬದಲ್ಲಿ ಈಗಾಗಲೇ ಪಾಲನ್ನು ಮಾಡಲಾಗಿದೆಯೆಂದು ವಾದಿಸಿ, ದಾವೆಯನ್ನು ವಜಾಗೊಳಿಸಲು ಪ್ರಾರ್ಥನೆ ಸಲ್ಲಿಸಿರುತ್ತಾರೆ. ಪ್ರತಿವಾದಿ ಸಂ.4 ಅಂದರೆ ರಿಟ್ ಅರ್ಜಿ ಸಂ. 70162/2012 ರಲ್ಲಿನ 2ನೇ ಅರ್ಜಿದಾರರು, 2ನೇ ಪ್ರತಿವಾದಿಗಳು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಳ್ಳುವ ಮೆಮೋವನ್ನು ದಾಖಲಿಸಿರುತ್ತಾರೆ. ಅದರಿಂದ, ಪ್ರತಿವಾದಿ 1 ಮತ್ತು 3 ಇವರುಗಳು, ವಾದಿಗಳ ವಾದವನ್ನು ಬೆಂಬಲಿಸುವ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

6. ಆ ತರುವಾಯ, 2 ಮತ್ತು 4ನೇ ಪ್ರತಿವಾದಿಗಳು, ಅಧಿನಿಯಮದ 33(1)ನೇ ಪ್ರಕರಣದಡಿಯಲ್ಲಿ ಸಾಕಷ್ಟು ಸ್ಟಾಂಪು ಹಚ್ಚದೆ ಅವರು ಹಾಜರುಪಡಿಸಿದ 22.9.1993ನೇ ದಿನಾಂಕದ ಪಾಲು ಕ್ರಯಪತ್ರವನ್ನು ಪಡೆಯಲು ಮತ್ತು ಸದರಿ ದಸ್ತಾವೇಜಿನ ಮೇಲೆ, ಕೊರತೆಯಿರುವ ಮುದ್ರಾಂಕ ಶುಲ್ಕವನ್ನು ಮತ್ತು ಸಂದಾಯ ಮಾಡಬೇಕಾಗಿರುವ ದಂಡವನ್ನು ಸಂಗ್ರಹಿಸಲು ಬಾಗಲಕೋಟೆಯ ಜಿಲ್ಲಾ ರಿಜಿಸ್ಟ್ರಾರರಿಗೆ ಅದನ್ನು ಉಲ್ಲೇಖಿಸುವ ಅಧಿವಿಚಾರಣಾ ನ್ಯಾಯಾಲಯವನ್ನು ಕೋರಿರುತ್ತಾರೆ. ಸದರಿ ಅರ್ಜಿಯನ್ನು ಆಕ್ಷೇಪಣೆಗಳ ವಿವರಪಟ್ಟಿಯನ್ನು ಸಲ್ಲಿಸಲು ವಾದಿಗಳು ವಿರೋಧಿಸಿರುತ್ತಾರೆ.

7. ಅಧಿವಿಚಾರಣಾ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ: 70162/2012 ಅನುಬಂಧ–ಹೆಚ್ ಆಗಿರುವ ಪ್ರಶ್ನಿತ ಆದೇಶವನ್ನು ನೀಡುವ ಮೂಲಕ 2ರಿಂದ

4ನೇ ಪ್ರತಿವಾದಿಗಳು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿದ್ದು, ಜಿಲ್ಲಾ ರಿಜಿಸ್ಟ್ರಾರರಿಗೆ ದಿನಾಂಕ 22.09.1993ನೇ ದಿನಾಂಕದಂದು ಪಾಲು ಕ್ರಯಪತ್ರವನ್ನು ಕಳುಹಿಸಲು ಕಚೇರಿಗೆ ನಿರ್ದೇಶಿಸಿರುತ್ತದೆ ಮತ್ತು ಮುಂದುವರೆದು, 2 ಮತ್ತು 4ನೇ ಪ್ರತಿವಾದಿಗಳಿಗೆ ಸದರಿ ದಸ್ತಾವೇಜನ್ನು ಹಸ್ತಾಂತರಿಸಲು ಕಚೇರಿಗೆ ನಿರ್ದೇಶಿಸಿರುತ್ತದೆ. ಸದರಿ ಆದೇಶವನ್ನು ಅನುಸರಿಸಿ, ಜಿಲ್ಲಾ ರಿಜಿಸ್ಟ್ರಾರರು, ಸ್ಟ್ಯಾಂಪ್ ಶುಲ್ಕವನ್ನು 50 ರೂ.ಗಳ ದಂಡದೊಂದಿಗೆ ಲೆಕ್ಕ ಹಾಕಿದಲ್ಲಿ, ಸಂದಾಯ ಮಾಡಬೇಕಾದ ಸ್ಟಾಂಪು ಶುಲ್ಕವನ್ನು ಎಷ್ಟಾಗುತ್ತದೆಂಬುದನ್ನು ಮತ್ತು ಹತ್ತುಪಟ್ಟು ಗರಿಷ್ಟ ದಂಡವನ್ನು ಲೆಕ್ಕಹಾಕಿದಲ್ಲಿ ಸಂದಾಯ ಮಾಡಬೇಕಾದ ಸ್ಟಾಂಪು ಶುಲ್ಕ ಎಷ್ಟಾಗುತ್ತದೆಂಬುದನ್ನು ನಿರ್ಧರಿಸಿ ಅನುಬಂಧ–ಎಫ್ ಪ್ರಕಾರ ಅಧಿವಿಚಾರಣಾ ನ್ಯಾಯಾಲಯಕ್ಕೆ ಅವರ ನಿರ್ಣಯವನ್ನು ಕಳುಹಿಸಿರುತ್ತಾರೆ.

8. ಆ ತರುವಾಯ, 2 ಮತ್ತು 4ನೇ ಪ್ರತಿವಾದಿಗಳು, ಮುದ್ರಾಂಕಗಳ ಜಿಲ್ಲಾ ರಿಜಿಸ್ಟ್ರಾರರು, ತಮ್ಮ ವಿವೇಚನಾಧಿಕಾರವನ್ನು ಬಳಸಿ ನೀಡಿದ ನಿರ್ಣಯದ ಹಿನ್ನೆಲೆಯಲ್ಲಿ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಸಂದಾಯ ಮಾಡಲು ತಮಗೆ ಅನುಮತಿ ನೀಡಬೇಕೆಂದು ಅಧಿವಿಚಾರಣಾ ನ್ಯಾಯಾಲಯವನ್ನು ಕೋರಿಕೊಂಡು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದಡಿಯಲ್ಲಿ ಅರ್ಜಿ ಸಂಖ್ಯೆ ಐ.ಎ. 16ನ್ನು ಸಲ್ಲಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು, ಅನುಬಂಧ–ಹೆಚ್ ಆದ ಪ್ರಶ್ನಿತ ಆದೇಶದ ಮೂಲಕ, ಅಧಿನಿಯಮದ 34(ಎ)ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ ಶುಲ್ಕದ ಹತ್ತುಪಟ್ಟು ದಂಡವನ್ನು ವಿಧಿಸುವುದರ ಮೂಲಕ ಐ.ಎ.16 ಅರ್ಜಿಯನ್ನು ಅಂಗೀಕರಿಸಿ, ಕೊರತೆಬಿದ್ದ ಸ್ಟಾಂಪು ಶುಲ್ಕಕ್ಕೆ ಸಂಬಂಧಿಸಿದಂತೆ 1,91,400/– ರೂ.ಗಳನ್ನು ಸಂದಾಯು ಮಾಡಲು 2 ಮತ್ತು 4ನೇ ಪ್ರತಿವಾದಿಗಳಿಗೆ ನಿರ್ದೇಶಿಸಲಾಗಿರುತ್ತದೆ.

9. ಪ್ರಶ್ನಿತ ಆದೇಶ ಅನುಬಂಧ–ಹೆಚ್ ನ ಮೂಲಕ ಬಾಧಿತರಾದ 2 ಮತ್ತು 4ನೇ ಪ್ರತಿವಾದಿಗಳು, ಆದೇಶ ಅನುಬಂಧ–ಹೆಚ್ ಅನ್ನು ರದ್ದುಪಡಿಸಲು ಕೋರಿ ರಿಟ್ ಅರ್ಜಿ 70162/12ರಲ್ಲಿ ಅದನ್ನು ಪ್ರಶ್ನಿಸಲಾಗಿರುತ್ತದೆ.

10. 2 ಮತ್ತು 4ನೇ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು, ಅಧಿವಿಚಾರಣಾ ನ್ಯಾಯಾಲಯವು, ಅಧಿನಿಯಮದ 34ನೇ ಪ್ರಕರಣದಡಿಯಲ್ಲಿ ಕಡಿಮೆ ದಂಡವನ್ನು ವಿಧಿಸಲು ತನ್ನ ವಿವೇಚನಾಧಿಕಾರವನ್ನು ಬಳಸಬಹುದಾಗಿದ್ದಾಗ್ಯೂ, ಹತ್ತುಪಟ್ಟು ಗರಿಷ್ಠ ದಂಡದೊಂದಿಗೆ, ಕೊರತೆಯಿರುವ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಲು 2 ಮತ್ತು 4ನೇ ಪ್ರತಿವಾದಿಗಳಿಗೆ ನಿರ್ದೇಶಿಸುವ ಮೂಲಕ ಅದು ತಪ್ಪನ್ನು ಎಸಗಿದೆಯೆಂದು ವಾದಿಸಿರುತ್ತಾರೆ. ಪ್ರಶ್ನಿತ ಆದೇಶ ಅನುಬಂಧ-ಹೆಚ್, ***ಕೆ. ಗೋವಿಂದೇಗೌಡ -ವಿರುದ್ಧ- ಅಕ್ಕಯ್ಯಮ್ಮ ಮತ್ತು ಇತರರು*** [1], ಪ್ರಕರಣದಲ್ಲಿ ಈ ನ್ಯಾಯಾಲಯದ ಮಾನ್ಯ ಏಕಸದಸ್ಯ ಪೀಠದ ತೀರ್ಪಿಗೆ ವಿರುದ್ಧವಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಇದರೊಂದಿಗೆ, ಅವರು ಅನುಬಂಧ-ಹೆಚ್ ಆದ ಪ್ರಶ್ನಿತ ಆದೇಶವನ್ನು ರದ್ದುಪಡಿಸುವ ಮೂಲಕ ರಿಟ್ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

11. ವಾದಿಗಳ ಪರ ಮಾನ್ಯ ವಕೀಲರು ***ಮಿಸ್. ಸಾಂಡ್ರಾ ಲೆಸ್ಲಿ ಅನ್ನಾ ಬಾರ್ಟೆಲ್ಸ್ -ವಿರುದ್ಧ- ಮಿಸ್.ಪಿ. ಗುಣವತಿ***[2], ಪ್ರಕರಣದಲ್ಲಿ ಮತ್ತು ***ದಿಗಂಬರ್ ವರ್ಟೆ ಮತ್ತು ಇತರರು-ವಿರುದ್ಧ-ಜಿಲ್ಲಾ ರಿಜಿಸ್ಟ್ರಾರ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಮತ್ತು ಮತ್ತೊಬ್ಬರು***[3], ಪ್ರಕರಣಗಳಲ್ಲಿ ಸಲ್ಲಿಸಿದ, ಈ ನ್ಯಾಯಾಲಯದ ಎರಡು ವಿಭಾಗೀಯ ನ್ಯಾಯಾಲಯಗಳ ಎರಡು ತೀರ್ಪುಗಳಿಗನುಸಾರವಾಗಿ ಅಧಿವಿಚಾರಣಾ ನ್ಯಾಯಾಲಯವು ಪ್ರಶ್ನಿತ ಆದೇಶ ಅನುಬಂಧ-ಹೆಚ್ ಅನ್ನು ಹೊರಡಿಸಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ಆದೇಶದಲ್ಲಿ ಯಾವುದೇ ಕಾನೂನುಬಾಹಿರತೆ ಅಥವಾ ಅಸ್ಥಿರತೆ ಇಲ್ಲದಿರುವುದರಿಂದ, ಈ ನ್ಯಾಯಾಲಯದ ಮಧ್ಯೆ ಪ್ರವೇಶಿಕೆಯು ಸಮರ್ಥನೀಯವಾಗಿರುವುದಿಲ್ಲ ಮತ್ತು 2 ಮತ್ತು 4ನೇ ಪ್ರತಿವಾದಿಗಳು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 70162/12ನ್ನು ವಜಾಮಾಡಲು ಪ್ರಾರ್ಥನೆ ಸಲ್ಲಿಸಿರುತ್ತಾರೆ.

1. 2011 (4) ಕೆಸಿಸಿಆರ್ 2799
2. ಎಐಆರ್ 2013 ಕೆಎಆರ್ಎನ್ 52
3. 2013(4) ಕೆಎಆರ್.ಎಲ್.ಎಲ್.ಜೆ. 247 (ಡಿಬಿ)

12. ವಾದಿಗಳ ಪರ ಮಾನ್ಯ ವಕೀಲರು, ರಿಟ್ ಅರ್ಜಿ ಸಂಖ್ಯೆ: 70162/12ರಲ್ಲಿ ಈ ನ್ಯಾಯಾಲಯವು, ಐ.ಎ.16ರ ಮೇಲೆ ಹೊರಡಿಸಿದ 28.8.12ನೇ ದಿನಾಂಕದ ಅನುಬಂಧ–ಹೆಚ್ ಆಗಿರುವ ಆದೇಶದ ಅನುಷ್ಠಾನಕ್ಕೆ ಮಾತ್ರ ಮಧ್ಯಂತರ ತಡೆಯಾಜ್ಞೆಯನ್ನು ನೀಡಿದ್ದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ಮುಂದುವರೆಸುವುದಕ್ಕೆ ನಿರಾಕರಿಸಿರುತ್ತಾರೆ. ಆದ್ದರಿಂದ, ವಾದಿಗಳು ದಾವೆಯ ಹೆಚ್ಚಿನ ನಡಾವಳಿಗಳಿಗೆ ಈ ನ್ಯಾಯಾಲಯವು ತಡೆಯಾಜ್ಞೆ ನೀಡದಿರುವುದನ್ನು ಪ್ರಸ್ತಾಪಿಸಿ ದಾವೆಯನ್ನು ಮುಂದುವರೆಸಲು ಅಧಿವಿಚಾರಣಾ ನ್ಯಾಯಾಲಯವನ್ನು ಕೋರಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದಡಿಯಲ್ಲಿ ಐ.ಎ.26 ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ. ಅದಕ್ಕೆ ಬದಲಾಗಿ, ಅಧಿವಿಚಾರಣಾ ನ್ಯಾಯಾಲಯವು, 23.9.2013ನೇ ದಿನಾಂಕದ ಆದೇಶದ ಮೂಲಕ ಆತನ ಐ.ಎ.26 ಅರ್ಜಿಯನ್ನು ತಿರಸ್ಕರಿಸಿ ದೋಷವನ್ನು ಎಸಗಿರುತ್ತದೆ. ಮತ್ತು ಇದರಿಂದ ಬಾಧಿತರಾದ ವಾದಿಗಳು, ತಮ್ಮ ರಿಟ್ ಅರ್ಜಿಗೆ ಅನುಬಂಧ–ಹೆಚ್ ಮೇರೆಗಿನ 23.9.2013ನೇ ದಿನಾಂಕದ ಆದೇಶವನ್ನು ರದ್ದುಪಡಿಸಿ ಸರ್ಷಿಯೋರರಿ ರಿಟ್ ಅನ್ನು ಕೋರಿ ಮತ್ತು ಈ ದಾವೆಯನ್ನು ಮುಂದುವರೆಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸುವ ಮ್ಯಾಂಡಮಸ್ ರಿಟ್ ಅನ್ನು ಕೋರಿ ರಿಟ್ ಅರ್ಜಿ ಸಂ. 85787/13ನ್ನು ಸಲ್ಲಿಸಿರುತ್ತಾರೆ.

13. ***ಕೆ. ಗೋವಿಂದೇ ಗೌಡ*** ಪ್ರಕರಣದಲ್ಲಿ, ಈ ನ್ಯಾಯಾಲಯದ ಏಕಸದಸ್ಯಪೀಠ ನ್ಯಾಯಾಧೀಶರು ನೀಡಿರುವ ತೀರ್ಪನ್ನು, ***ದಿಗಂಬರ್ ವರ್ಟಿ ಮತ್ತು ಇತರರು*** ಪ್ರಕರಣದಲ್ಲಿ, ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೂಲಕ ಯುಕ್ತ ಕಾನೂನಲ್ಲವೆಂದು ಅಭಿಪ್ರಾಯಪಟ್ಟಿರುವುದನ್ನು ಗಮನಿಸಬೇಕಾಗಿದೆ.

14. ಈ ಪ್ರಕರಣದಲ್ಲಿ ಒಳಗೊಂಡ ವಿವಾದಾಂಶವು ಈ ಮುಂದಿನ ಪ್ರಕರಣಗಳಲ್ಲಿ ಈ ನ್ಯಾಯಾಲಯವು ನೀಡಿದ ತೀರ್ಪುಗಳಿಂದ ನೇರವಾಗಿ ಒಳಗೊಳ್ಳುತ್ತವೆ:

(1) ***ಲಕ್ಷ್ಮೀನಾರಾಯಣಾಚಾರ್ –ವಿರುದ್ಧ– ನಾರಾಯಣ್ ಮತ್ತು ಮತ್ತೊಬ್ಬರು,*** 1969 (2) ಎಂ.ವೈ.ಎಸ್.ಎಲ್.ಜೆ. 299

(2) ***ಶಾಂತ್‌ಕುಮಾರ್ ವಿ.ವಿ. –ವಿರುದ್ಧ– ಶ್ರೀ ಮಾನಿಕ್ ಸತ್ವಾಜಿರಾವ್ ಜಾತರ್*** 4.11.2008ರಂದು ವಿಲೆಯಾದ ರಿಟ್ ಅರ್ಜಿ ಸಂಖ್ಯೆ: 5870/2008,

(3) ***ದಿಗಂಬರ್ ವರ್ಟಿ ಮತ್ತು ಇತರರು–ವಿರುದ್ಧ–ಜಿಲ್ಲಾ ರಿಜಿಸ್ಟ್ರಾರ್, ಬೆಂಗಳೂರು ನಗರ ಜಿಲ್ಲೆ ಮತ್ತು ಮತ್ತೊಬ್ಬರು*** 2013(4) ಕೆಎಆರ್‌ಎಲ್‌ಜೆ 247 (ವಿ.ಭಾ)

(4) ***ಮಿಸ್. ಸಾಂಡ್ರಾ ಲೆಸ್ಲಿ ಅನ್ನಾ ಬಾರ್ಟೆಲ್ಸ್–ವಿರುದ್ಧ–ಮಿಸ್.ಪಿ. ಗುಣವತಿ*** ಎಐಆರ್ 2013 ಕೆಎಆರ್‌ಎನ್ 52

ಮೇಲಿನ ತೀರ್ಪುಗಳಿಗೆ ಅನುಸಾರವಾಗಿ, ದಾವೆ ಹೂಡಿದ ಯಾರೇ ಪಕ್ಷಕಾರರು ಹಾಜರುಪಡಿಸಿದ ದಸ್ತಾವೇಜನ್ನು ಅಧಿನಿಯಮದಡಿಯಲ್ಲಿ ಅಗತ್ಯಪಡಿಸಿದಂತೆ ಮುದ್ರಾಂಕಗೊಳಿಸಿಲ್ಲವೆಂದು ಸಿವಿಲ್ ನ್ಯಾಯಾಲಯದ ಗಮನಕ್ಕೆ ಬಂದಾಗಲೆಲ್ಲಾ, ಯಾವುದೇ ಆಯ್ಕೆ ಇರುವುದಿಲ್ಲ. ಆದರೆ ಕೂಡಲೇ ಅಧಿನಿಯಮದ 33(1)ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ ಅಂಥ ದಸ್ತಾವೇಜನ್ನು ಪರಿಬದ್ಧಗೊಳಿಸಲು ಆದೇಶಿಸುತ್ತದೆ. ಆ ತರುವಾಯ, ಪಕ್ಷಕಾರನು ಬಯಸಿದಂತೆ ಮತ್ತು ಬಯಸಿದಾಗಲೆಲ್ಲಾ ಸಾಕ್ಷ್ಯದಲ್ಲಿ ಅಂಥ ದಸ್ತಾವೇಜನ್ನು ಪರಿಚಯಿಸುವ ಅಥವಾ ನೀಡುವ ಆಯ್ಕೆ ಸಿವಿಲ್ ನ್ಯಾಯಾಲಯಕ್ಕೆ ಇರುವುದಿಲ್ಲ. ಆದರೆ ಮುದ್ರಾಂಕ ಶುಲ್ಕ ಅಥವಾ ಹತ್ತುಪಟ್ಟು ದಂಡದೊಂದಿಗೆ ಸಂದಾಯ ಮಾಡಬಹುದಾದ ಅದರ ಕೊರತೆಯನ್ನು ಲೆಕ್ಕಹಾಕಲು ಅದರ ಕಚೇರಿಗೆ ನಿರ್ದೇಶಿಸುತ್ತದೆ ಮತ್ತು ಸದರಿ ಮೊಬಲಗಿನ ಸಂದಾಯಕ್ಕೆ ಸಂಬಂಧಿಸಿದ ದಿನಾಂಕವನ್ನು ನಿಗದಿ ಮಾಡುತ್ತದೆ ಮತ್ತು ಆ ತರುವಾಯ ಅಧಿನಿಯಮದ 37(1)ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ ಮುದ್ರಾಂಕಗಳಿಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯ ಜಿಲ್ಲಾ ರಿಜಿಸ್ಟ್ರಾರರಿಗೆ ಸದರಿ ದಸ್ತಾವೇಜಿನ ಅನುಪ್ರಮಾಣಿತ ಪ್ರತಿಯನ್ನು ಕಳುಹಿಸಬೇಕು. ನ್ಯಾಯಾಲಯದ

ಕಚೇರಿಯು ಲೆಕ್ಕಹಾಕಿದಂತೆ ದಂಡದ ಹತ್ತುಪಟ್ಟು ಶುಲ್ಕವನ್ನು ಸಂದಾಯ ಮಾಡಲು ಬದ್ಧನಾಗಿರುವಂಥ ಪಕ್ಷಕಾರನು ನಿರ್ದಿಷ್ಟ ಸಮಯದೊಳಗೆ ಮೊಬಲಗನ್ನು ಸಂದಾಯ ಮಾಡಲು ಮತ್ತು ಸಾಕ್ಷ್ಯದಲ್ಲಿ ದಸ್ತಾವೇಜನ್ನು ಬಳಸಿಕೊಳ್ಳಲು ವಿಫಲನಾದಲ್ಲಿ ಅಂಥ ಸಂದರ್ಭದಲ್ಲಿ, ನ್ಯಾಯಾಲಯವೇ ಸ್ವತಃ ಅಧಿನಿಯಮದ 37(2)ನೇ ಪ್ರಕರಣದಡಿಯಲ್ಲಿ, ಉದ್ದೇಶಿಸಲಾದಂತೆ, ಮುಂದಿನ ಕ್ರಮಕ್ಕೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯ ಜಿಲ್ಲಾ ರಿಜಿಸ್ಟ್ರಾರರಿಗೆ ಮೂಲ ದಸ್ತಾವೇಜನ್ನು ಕಳುಹಿಸತಕ್ಕದಕ್ಕು.

14. ಪ್ರಸ್ತುತ ಪ್ರಕರಣದಲ್ಲಿ, 2ರಿಂದ 4ನೇ ಪ್ರತಿವಾದಿಗಳೇ ಸ್ವತಃ, ತಾವು ಯುಕ್ತವಾಗಿ ಮುದ್ರಾಂಕ ಶುಲ್ಕ ತುಂಬದೆ ಹಾಜರುಪಡಿಸಿರುವ 22.9.1993ನೇ ದಿನಾಂಕದ ಪಾಲುಕ್ರಯಪತ್ರವನ್ನು ತಡೆಯಲು ಅಧಿವಿಚಾರಣಾ ನ್ಯಾಯಾಲಯವನ್ನು ಕೋರಿ ಮತ್ತು ಇದನ್ನು ಸಂದಾಯ ಮಾಡಬಹುದಾದ ಕೊರತೆಯಿರುವ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಸಂಗ್ರಹಿಸಲು ಜಿಲ್ಲಾ ಆಯುಕ್ತರು, ಬಾಗಲಕೋಟೆ ಇವರಿಗೆ ಉಲ್ಲೇಖಿಸಲು ಅಧಿನಿಯಮದ 33(1)ನೇ ಪ್ರಕರಣದಡಿಯಲ್ಲಿ ಐ.ಎ.13ನೇ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅಧಿನಿಯಮದ 33(1)ನೇ ಪ್ರಕರಣದಡಿಯಲ್ಲಿ ಸದರಿ ದಸ್ತಾವೇಜನ್ನು ಪರಿಬದ್ಧಗೊಳಿಸಿದ ತರುವಾಯ, ಹತ್ತುಪಟ್ಟು ದಂಡದೊಂದಿಗೆ ಅಧಿನಿಯಮದ ಸೂಕ್ತ ಉಪಬಂಧಗಳ ಉಲ್ಲೇಖದೊಂದಿಗೆ ಕೊರತೆಯಿರುವ ಮುದ್ರಾಂಕ ಶುಲ್ಕವನ್ನು ಲೆಕ್ಕಹಾಕಲು ಅದರ ಕಚೇರಿಗೆ ನಿರ್ದೇಶಿಸುವುದಕ್ಕೆ ಬದಲಾಗಿ, ಜಿಲ್ಲಾ ರಿಜಿಸ್ಟ್ರಾರ್ ಬಾಗಲಕೋಟೆ ಇವರಿಗೆ ಈ ದಸ್ತಾವೇಜನ್ನು ಕಳುಹಿಸಲು ಕಚೇರಿಗೆ ನಿರ್ದೇಶಿಸಿರುತ್ತಾರೆ. ಇವರು 5/– ರೂ.ಗಳ ಶುಲ್ಕದೊಂದಿಗೆ ಸಂದಾಯ ಮಾಡಿದಲ್ಲಿ ಎಷ್ಟು ಮುದ್ರಾಂಕ ಶುಲ್ಕವಾಗುತ್ತದೆ ಮತ್ತು ಹತ್ತುಪಟ್ಟು ದಂಡಸಂದಾಯ ಮಾಡಿದಲ್ಲಿ ಕೊರತೆ ಮುದ್ರಾಂಕ ಶುಲ್ಕ ಎಷ್ಟಾಗುತ್ತದೆ ಎಂಬುದನ್ನು ಲೆಕ್ಕಹಾಕಿರುತ್ತಾರೆ. ಮತ್ತು ತಮ್ಮ ತೀರ್ಮಾನವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿರುತ್ತಾರೆ.

15. ಆ ತರುವಾಯ, 2 ಮತ್ತು 4ನೇ ಪ್ರತಿವಾದಿಗಳು, ಜಿಲ್ಲಾ ಆಯುಕ್ತರು, ತಮ್ಮ ವಿವೇಚನಾಧಿಕಾರವನ್ನು ಬಳಸಿ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಶುಲ್ಕ ಮತ್ತು ದಂಡವನ್ನು ಸಂದಾಯ ಮಾಡಲು ತಮಗೆ ಅನುಮತಿ ನೀಡಬೇಕೆಂದು

ಅಧಿವಿಚಾರಣಾ ನ್ಯಾಯಾಲಯವು ಕೋರಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದಡಿಯಲ್ಲಿ ಐ.ಎ.16ನೇ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯ ಅರ್ಜಿಯನ್ನು ಪುರಸ್ಕರಿಸಿ, 1.91.400/– ರೂ.ಗಳ ಮೊಬಲಗಿನ ಅಂದರೆ ಹತ್ತುಪಟ್ಟು ದಂಡದೊಂದಿಗೆ ಕೊರತೆಯಿರುವ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಲು 2 ಮತ್ತು 4ನೇ ಪ್ರತಿವಾದಿಗಳಿಗೆ ನಿರ್ದೇಶಿಸಿರುತ್ತದೆ. 2 ಮತ್ತು 4ನೇ ಪ್ರತಿವಾದಿಗಳ ಪ್ರಕಾರ, ***ಕೆ. ಗೋವಿಂದೇಗೌಡ*** ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಅಧಿನಿಯಮದ 34ನೇ ಪ್ರಕರಣದ ಪರಂತುಕದಡಿಯಲ್ಲಿ ನಿಹಿತವಾಗಿರುವ ಆತನ ವಿವೇಚನಾಧಿಕಾರವನ್ನು ಬಳಸಿ ಕಡಿಮೆ ದಂಡವನ್ನು ವಿಧಿಸಬೇಕಾಗಿರುತ್ತದೆ.

16. ***ಕೆ. ಗೋವಿಂದೇಗೌಡ*** ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಉತ್ತಮ ಕಾನೂನಲ್ಲವೆಂದು, ಈ ಮೇಲೆ ಈಗಾಗಲೇ ಹೇಳಿರುವುದರಿಂದ ಮತ್ತು ***(1) ಮಿಸ್. ಸಾಂಡ್ರಾ ಲೆಸ್ಲಿ ಅನ್ನಾ ಬಾರ್ಟೆಲ್ಸ್–ವಿರುದ್ಧ–ಮಿಸ್.ಪಿ. ಗುಣವತಿ ಮತ್ತು (2) ದಿಗಂಬರ್ ವರ್ಟಿ ಮತ್ತು ಇತರರು–ವಿರುದ್ಧ–ಜಿಲ್ಲಾ ರಿಜಿಸ್ಟ್ರಾರ್, ಬೆಂಗಳೂರು ನಗರ ಜಿಲ್ಲೆ ಮತ್ತು ಮತ್ತೊಬ್ಬರು***–ಪ್ರಕರಣಗಳಲ್ಲಿ ಈ ನ್ಯಾಯಾಲಯದ ಎರಡು ವಿಭಾಗೀಯ ಪೀಠಗಳು ನೀಡಿರುವ ತೀರ್ಪುಗಳ ಹಿನ್ನೆಲೆಯಲ್ಲಿ, 2 ಮತ್ತು 4ನೇ ಪ್ರತಿವಾದಿಗಳು, ಸಾಕ್ಷ್ಯದಲ್ಲಿ, 22.9.1993ನೇ ದಿನಾಂಕದ ನೋಂದಣಿಯಾಗದ ಪಾಲುಕ್ರಯಪತ್ರವನ್ನು ಪರಿಚಯಿಸಲು ಬಯಸಿದಲ್ಲಿ, ನಂತರ, ಅವರಿಗೆ ಯಾವುದೇ ಆಯ್ಕೆ ಇರುವುದಿಲ್ಲ. ಆದರೆ, ಅಧಿವಿಚಾರಣಾ ನ್ಯಾಯಾಲಯವು ನಿರ್ದೇಶಿಸಿದಂತೆ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಬೇಕು ಮತ್ತು ಹಾಗೆ ಮಾಡಲು ಅವರು ವಿಫಲವಾದಲ್ಲಿ, ಸದರಿ ದಸ್ತಾವೇಜುಗಳನ್ನು ಪರಿಬದ್ಧಗೊಳಿಸಿದಂಥ ಅಧಿವಿಚಾರಣಾ ನ್ಯಾಯಾಲಯವು ಯಾವುದೇ ಆಯ್ಕೆಯನ್ನು ಹೊಂದಿರುವುದಿಲ್ಲ. ಆದರೆ ಅಧಿನಿಯಮದ 37(2)ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂಥ ಕ್ರಮದಲ್ಲಿ ಮುಂದುವರೆದು ಜಿಲ್ಲಾ ಆಯುಕ್ತರಿಗೆ ಸ್ವತಃ ಮೂಲದ ಪಾಲುಕ್ರಯಪತ್ರವನ್ನು ಕಳುಹಿಸಬೇಕಾಗಿರುತ್ತದೆ.

17. 2 ಮತ್ತು 4ನೇ ಪ್ರತಿವಾದಿಗಳು ಸಲ್ಲಿಸಿರುವ ರಿಟ್ ಅರ್ಜಿ ಸಂ. 70162/12ನ್ನು ವಿಲೆ ಮಾಡುವ ಹಿನ್ನೆಲೆಯಲ್ಲಿ, ವಾದಿಗಳು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದಡಿಯಲ್ಲಿ ಅವರು ಸಲ್ಲಿಸಿದ ಐ.ಎ. 26ನ್ನು ರದ್ದುಪಡಿಸಲು

ಕೋರಿ ಮತ್ತು ದಾವೆಯನ್ನು ಮುಂದುವರೆಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸುವ ಮ್ಯಾಂಡಮಸ್‌ನ್ನು ಕೋರಿ ಅವರು ಸಲ್ಲಿಸಿರುವ ರಿಟ್ ಅರ್ಜಿ ಸಂ. 85787/2013 ಊರ್ಜಿತವಾಗಿರುವುದಿಲ್ಲ.

18. ತದನುಸಾರವಾಗಿ, ಎರಡೂ ರಿಟ್ ಅರ್ಜಿಗಳನ್ನು ಈ ಮುಂದಿನ ಅಭಿಪ್ರಾಯಗಳೊಂದಿಗೆ ವಿಲೆ ಮಾಡಲಾಗಿದೆ :

2 ಮತ್ತು 4ನೇ ಪ್ರತಿವಾದಿಗಳು, 22.09.1993ನೇ ದಿನಾಂಕದ ಪಾಲು ಕ್ರಯಪತ್ರವನ್ನು ನೀಡಲು ಅಥವಾ ಪರಿಚಯಿಸಲು ಬಯಸಿದಲ್ಲಿ 30.06.2014ರಂದು ಅಥವಾ ಮೊದಲು, ಅಧಿವಿಚಾರಣಾ ನ್ಯಾಯಾಲಯವು ನಿರ್ದೇಶಿಸಿದಂತೆ, 1,91,400/– ರೂ.ಗಳ ಕೊರತೆ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡತಕ್ಕದ್ದು. ತರುವಾಯ ಅಧಿವಿಚಾರಣಾ ನ್ಯಾಯಾಲಯವು, ಅಧಿನಿಯಮದ 37(1)ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ ಜಿಲ್ಲಾ ಆಯುಕ್ತರು, ಬಾಗಲಕೋಟೆ ಇವರಿಗೆ ಸದರಿ ದಸ್ತಾವೇಜಿನ ಅನುಪ್ರಮಾಣಿತ ಪ್ರತಿಯನ್ನು ಕಳುಹಿಸತಕ್ಕದ್ದು. ಅವರು, ಜೂನ್ 2014ರ ಕೊನೆಯ ವೇಳೆಗೆ 1,91,400/– ರೂ.ಗಳ ಕೊರತೆ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಲು ವಿಫಲರಾದಲ್ಲಿ ಮತ್ತು 22.9.1993ರಂದು ಪಾಲಕ್ರಯ ಪತ್ರವನ್ನು ಆಧರಿಸಲು ನಿರಾಕರಿಸಿದ ಯಾವುದೇ ಸಂದರ್ಭದಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಅಧಿನಿಯಮದ 37(2)ನೇ ಪ್ರಕರಣದಡಿಯಲ್ಲಿ ಜಿಲ್ಲಾ ಆಯುಕ್ತರು, ಬಾಗಲಕೋಟೆ ಇವರಿಗೆ ಸದರಿ ಮೂಲ ದಸ್ತಾವೇಜುಗಳನ್ನು ಕಳುಹಿಸತಕ್ಕದ್ದು. ಅಧಿವಿಚಾರಣಾ ನ್ಯಾಯಾಲಯವು ನಿರ್ದೇಶಿಸಿದಂತೆ ದಂಡದೊಂದಿಗೆ ಕೊರತೆ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಿದ ತರುವಾಯ 2 ಮತ್ತು 4ನೇ ಪ್ರತಿವಾದಿಗಳು, ಈ ವಿಷಯದಲ್ಲಿ, ಮುಂದಿನ ಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆಯುಕ್ತರು, ಬಾಗಲಕೋಟೆ ಇವರಲ್ಲಿಗೆ ಹೋಗಲು ಸ್ವತಂತ್ರರಾಗಿರುತ್ತಾರೆ.

19. 2009ನೇ ವರ್ಷದ ದಾವೆಯೆಂಬುದನ್ನು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯಕ್ಕೆ, ಈ ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ದಾವೆಯನ್ನು ವಿಲೆ ಮಾಡಲು ನಿರ್ದೇಶಿಸಿದೆ.